Updated



# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಶ್ರೀಮತಿ ಗೌರಮ್ಮ, ಅಂದಿನ ಅಧ್ಯಕ್ಷರು, ಹಿರೇಹಳ್ಳಿ ಗ್ರಾಮ ಪಂಚಾಯತಿ, ಚಳ್ಳಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ ಇವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 43(ಎ) ರನ್ವಯ ಕ್ರಮ ಜರುಗಿಸುವ ಬಗ್ಗೆ.

ಓದಲಾಗಿದೆ:

1) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ ಚಿತ್ರದುರ್ಗ ಇವರ ಪತ್ರ ಸಂಖ್ಯೆ:ಜಿಪಂ/ಆ(3)/ಸಿಪಿಎ/ಸಿಆರ್-44/2017-18, ದಿನಾಂಕ:15.11.2017
2) ಶ್ರೀಮತಿ ಗೌರಮ್ಮ, ಅಧ್ಯಕ್ಷರು, ಹಿರೇಹಳ್ಳಿ ಗ್ರಾಮ ಪಂಚಾಯತಿ, ಚಳ್ಳಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ ಇವರ ಲಿಖಿತ ಹೇಳಿಕೆ ದಿನಾಂಕ: 05.02.2018

**ಪ್ರಸ್ತಾವನೆ:-**

ಮೇಲೆ ಓದಲಾದ ಕ್ರಮಾಂಕ (1)ರ ಪ್ರಸ್ತಾವನೆಯಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಚಿತ್ರದುರ್ಗ ಇವರು ಹಿರೇಹಳ್ಳಿ ಗ್ರಾಮ ಪಂಚಾಯಿತಿಯ 2015-16 ಮತ್ತು 2016-17ನೇ ಸಾಲಿನ ವಿಶೇಷ ಲೆಕ್ಕ ತಪಾಸಣೆ ವರದಿಯನ್ನು ಸಲ್ಲಿಸಿದ್ದು, ಸದರಿ ವರದಿಯಲ್ಲಿ ಆಕ್ಷೇಪಣಾ ಮೊತ್ತ ರೂ.39,75,613/- ಮತ್ತು ವಸೂಲಾತಿ ಮೊತ್ತ ರೂ.20,329/-ಗಳಿಗೆ ಹಾಗೂ ವಿವಿಧ ನ್ಯೂನ್ಯತೆಗಳ ಬಗ್ಗೆ ತಿಳಿಸುತ್ತಾ, ಸದರಿ ವಿಶೇಷ ಲೆಕ್ಕ ತಪಾಸಣಾ ವರದಿಯಲ್ಲಿನ ಆಕ್ಷೇಪಣಾ ಕಂಡಿಕೆಗಳ/ ನ್ಯೂನ್ಯತೆಗಳ ಮೇರೆಗೆ ಸಂಬಂಧಪಟ್ಟ ಅವಧಿಯ ಪಿ.ಡಿ.ಓ ಮತ್ತು ಅಧ್ಯಕ್ಷರ ವಿರುದ್ಧ ನಿಯಮಾನುಸಾರ ಕ್ರಿಮಿನಲ್ ಮೊಕದ್ದಮೆ ದಾಖಲಿಸಲು ಕ್ರಮ ಜರುಗಿಸಿ, ವರದಿ ಸಲ್ಲಿಸಲು ದಿನಾಂಕ:08.09.2017ರ ಪತ್ರದಲ್ಲಿ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಚಳ್ಳಕೆರೆ ಇವರಿಗೆ ತಿಳಿಸಲಾಗಿರುತ್ತದೆ. ಈ ಬಗ್ಗೆ ದಿನಾಂಕ:28.10.2017ರ ಪತ್ರದಲ್ಲಿ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಚಳ್ಳಕೆರೆ ಇವರು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ಪ್ರಕರಣದ 246(6) ರನ್ವಯ ಯಾವುದೇ ಲೆಕ್ಕ ಪರಿಶೋಧನಾ ವರದಿಗೆ ಮೂರು ತಿಂಗಳ ಒಳಗಾಗಿ ಕಾರ್ಯನಿರ್ವಾಹಕ ಅಧಿಕಾರಿ ವಿವರಣೆಯನ್ನು ಸಲ್ಲಿಸಲು ಅವಕಾಶವಿರುವಂತೆ ಮೂರು ತಿಂಗಳ ಕಾಲಾವಕಾಶವನ್ನು ನೀಡಲಾಗಿದ್ದು, ಸದರಿ ವಿಶೇಷ ಲೆಕ್ಕ ತಪಾಸಣಾ ವರದಿಯ ಕಂಡಿಕೆ (6)(1) ಮತ್ತು (8)ಕ್ಕೆ ಸಂಬಂಧಿಸಿದಂತೆ, ಸೂಕ್ತ ವಿವರಣೆಯನ್ನು ದಾಖಲೆಗಳೊಂದಿಗೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯವರು ನೀಡಿದ್ದು, ಈ ಬಗ್ಗೆ ಸದರಿ ಅಧಿನಿಯಮದ ಪ್ರಕರಣ 246(7)ರಂತೆ, ವಿವರಣೆಯನ್ನು ಒಪ್ಪಿಕೊಂಡಿದ್ದು, ದಿನಾಂಕ:12.10.2017 ರಂದು ನಡೆದ ಅಡಾಕ್ ಸಮಿತಿಯ ಸಭೆಯಲ್ಲಿ ಪ್ಯಾರಾವನ್ನು ತೀರುವಳಿಗೊಳಿಸಿ ಕಂಡಿಕೆಗಳನ್ನು ಕೈಬಿಡಲಾಗಿರುತ್ತದೆ. ಎಂದು ತಿಳಿಸಿರುತ್ತಾರೆ.

ಉಳಿದಂತೆ, ವಿಶೇಷ ಲೆಕ್ಕ ತಪಾಸಣೆ ವರದಿಯ ಕಂಡಿಕೆ (10)(11) ಮತ್ತು (12)ಕ್ಕೆ ಯಾವುದೇ ವಿವರಣೆಯನ್ನು ಸಲ್ಲಿಸಿರುವುದಿಲ್ಲವೆಂದು ಮತ್ತು ವಿಶೇಷ ಲೆಕ್ಕ ತಪಾಸಣೆ ಕೈಗೊಂಡಾಗ ಕಂಡಿಕೆ (10) ಮತ್ತು (11)ಕ್ಕೆ ಯಾವುದೇ ದಾಖಲೆಗಳನ್ನು ಆಡಿಟ್‌ಗೆ ಸಲ್ಲಿಸದೆ ಇರುವುದರಿಂದ ರೂ.39,75,613/-ಗಳನ್ನು ಆಕ್ಷೇಪಣೆಯಲ್ಲಿರಿಸಿ, ಆಡಳಿತಾತ್ಮಕ ಕ್ರಮ ಕೈಗೊಳ್ಳಲು ಉಲ್ಲೇಖಿಸಿರುವುದರಿಂದ ಹಾಗೂ ವಿವರಣೆಯನ್ನು ಸಲ್ಲಿಸಲು ಅವಕಾಶ ಇರುವಂತೆ ದಿನಾಂಕ:07.09.2017, 27.09.2017 ಮತ್ತು 12.10.2017 ರಂದು ಅಡಾಕ್ ಸಭೆಗಳನ್ನು ಕರೆಯಲಾಗಿದ್ದು, ಮೂರು ತಿಂಗಳ ಕಾಲಾವಕಾಶವನ್ನು ನೀಡಲಾಗಿದ್ದರೂ ಸಹ ಕಂಡಿಕೆ (10) ಮತ್ತು (11)ಕ್ಕೆ ಯಾವುದೇ ವಿವರಣೆಯನ್ನು ನೀಡಿರುವುದಿಲ್ಲವೆಂದು ಅಲ್ಲದೆ, ಲೆಕ್ಕ ಪತ್ರಗಳನ್ನು ಲೆಕ್ಕ ಪರಿಶೋಧನೆಗೆ ಹಾಜರುಪಡಿಸಲು ಕಾರಣ ಕೇಳಿ ನೋಟೀಸ್ ನೀಡಿದ್ದರೂ ಸಹ ಲೆಕ್ಕ ತನಿಖೆಗೆ ಲೆಕ್ಕ ಪತ್ರಗಳನ್ನು ಹಾಜರು ಪಡಿಸಿರುವುದಿಲ್ಲವೆಂದು ವಿವರಿಸುತ್ತಾ, ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 29 ಲೆಪಬಿ 2006, ದಿನಾಂಕ:18.04.2007 ರಲ್ಲಿ ಲೆಕ್ಕಪತ್ರ ದಾಖಲೆಗಳನ್ನು ಆಡಿಟ್‌ಗೆ ಹಾಜರುಪಡಿಸುವುದು ಕಾರ್ಯದರ್ಶಿ ಹಾಗೂ ಅಧ್ಯಕ್ಷರ ಜವಾಬ್ದಾರಿಯಾಗಿರುವುದರಿಂದ ಹಾಗೂ ಲೆಕ್ಕಪತ್ರಗಳನ್ನು ಆಡಿಟ್‌ಗೆ ಹಾಜರುಪಡಿಸದೆ ಇದ್ದಲ್ಲಿ ಹಣ ದುರುಪಯೋಗ ಮಾಡಿದ ಶಂಕೆಯ ಮೇಲೆ ಕ್ರಿಮಿನಲ್ ಮೊಕದ್ದಮೆ ಹಾಗೂ ಸಿವಿಲ್ ಮೊಕದ್ದಮೆ ಎದುರಿಸಬೇಕಾಗುತ್ತದೆ ಎಂದು ಉಲ್ಲೇಖಿಸಿರುವುದಾಗಿ ವಿವರಿಸುತ್ತಾ

ದಾಖಲೆಗಳನ್ನು ಆಡಿಟ್‌ಗೆ ಸಲ್ಲಿಸದೆ ಇರುವುದರಿಂದ ಮೇಲ್ಕಂಡ ಆದೇಶದನ್ವಯ ಸದರಿ ಪಿ.ಡಿ.ಓ ರವರನ್ನು ಅಮಾನತ್ತುಗೊಳಿಸಲಾಗಿದ್ದು, ಅಧ್ಯಕ್ಷರಾದ ಶ್ರೀಮತಿ ಗೌರಮ್ಮ ಇವರ ಮೇಲೆ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 48(4)ರಂತೆ ಕ್ರಮ ವಹಿಸುವ ಬಗ್ಗೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ.

ಅದರಂತೆ, ಸದರಿ ಪ್ರಕರಣವನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 48(ಎ) ಮತ್ತು 48(4)ರಡಿಯಲ್ಲಿ ದಾಖಲಿಸಿಕೊಳ್ಳಲಾಹಿತು ಮತ್ತು ಆರೋಪಿತ ಅಧ್ಯಕ್ಷರಿಗೆ ಸದರಿ ಪ್ರಕರಣದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಚಿತ್ರದುರ್ಗ ಜಿಲ್ಲೆ ಇವರ ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಯನ್ನು ಲಗತ್ತಿಸಿ ದಿನಾಂಕ:21.12.2017ರಂದು ಕಾರಣ ಕೇಳುವ ನೋಟೀಸ್ಸನ್ನು ಜಾರಿಗೊಳಿಸಿ, 15ದಿನದೊಳಾಗಾಗಿ ಸಮಜಾಯಿಷಿಯನ್ನು ಸಲ್ಲಿಸುವಂತೆ ತಿಳಿಸಲಾಗಿರುತ್ತದೆ.

ಮೇಲೆ ಓದಲಾದ ಕ್ರಮಾಂಕ(2)ರಲ್ಲಿ ಶ್ರೀಮತಿ ಗೌರಮ್ಮ ಅಧ್ಯಕ್ಷರು, ಹಿರೇಹಳ್ಳಿ ಗ್ರಾಮ ಪಂಚಾಯತಿ, ಚಳ್ಳಕೆರೆ ತಾಲ್ಲೂಕು, ಇವರು ದಿನಾಂಕ:05.02.2018ರ ಲಿಖಿತ ಹೇಳಿಕೆಯಲ್ಲಿ "ನಾನು ಸುಮಾರು ಎರಡೂವರೆ ವರ್ಷಗಳಿಂದ ಅಧ್ಯಕರಾಗಿದ್ದು, ನನಗೆ ಪರಿಪೂರ್ಣ ಕಾನೂನಿನ ಜ್ಞಾನ ಇರುವುದಿಲ್ಲ, ಕಾಯ್ದೆ, ಮಾರ್ಗದರ್ಶಗಳನ್ನು ಓದಿ ಅರ್ಥ ಮಾಡಿಕೊಳ್ಳುವ ವಿದ್ಯಾಭ್ಯಾಸ ನನಗೆ ಇರುವುದಿಲ್ಲ, ಇದನ್ನು ತಿಳಿದ ಕೆಲವು ರಾಜಕೀಯ ಗುಂಪು, ಮುಂದುವರೆದ ಕೋಮಿನ ಜನರಿಂದ ನಾನು ಪರಿಶಿಷ್ಟ ಪಂಗಡ ಮಹಿಳೆ ಅಧ್ಯಕ್ಷರಾಗಿದ್ದರಿಂದ, ಅಧ್ಯಕ್ಷ ಪದವಿಯಿಂದ ಇಳಿಸುವ ಉದ್ದೇಶದಿಂದ ಕೆಲವು ಅಧಿಕಾರಿಗಳು ಮತ್ತು ರಾಜಕೀಯ ವಿರೋಧಿ ಗುಂಪು, ಈ ರೀತಿ ನಾನು ತಪ್ಪು ಮಾಡದೇ ಇದ್ದರು ಕ್ರಿಮಿನಲ್ ಮೊಕದ್ದಮೆ ಹಾಕಿದರೆ ಸದಸ್ಯತ್ವ ರದ್ದು ಆಗುತ್ತದೆ, ಅಧ್ಯಕ್ಷ ಪದವಿಯಿಂದ ವಜಾಗೊಳಿಸಬಹುದು ಎಂದು ಕೆಲವು ರಾಜಕೀಯ ವಿರೋಧಿ ಗುಂಪು ದುರುದ್ದೇಶ ಹೊಂದಿರುತ್ತದೆ ಎಂದು ಈ ಹಿಂದೆ ನಾನು ತಮಗೆ ಪತ್ರದ ಮೂಲಕ ತಿಳಿಸಿದ್ದು ಆದ್ದರಿಂದ ನಾನು ಯಾವುದೇ ಕಾನೂನು ಕಾಯ್ದೆ, ಮಾರ್ಗ ಸೂಚಿ ಉಲ್ಲಂಘನೆ ಹಣ ದುರುಪಯೋಗದ ಬಗ್ಗೆ ನನಗೆ ಜ್ಞಾನ ಗೊತ್ತಿರುವುದಿಲ್ಲವೆಂದು ತಿಳಿಸಿದ್ದಾರೆ.

ದಿನಾಂಕ:05.03.2018ರಂದು ಸರ್ಕಾರದಲ್ಲಿ ಸ್ವೀಕೃತಗೊಂಡಿರುವ ಆರೋಪಿತ ಅಧ್ಯಕ್ಷರ ಸಮಜಾಯಿಷಿಯನ್ನು ಪರಿಶೀಲಿಸಲಾಯಿತು ಹಾಗೂ ಸದರಿ ಪ್ರಕರಣದ ವಿಚಾರಣೆಯನ್ನು ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಅರೆನ್ಯಾಯಿಕ ನ್ಯಾಯಾಲಯದಲ್ಲಿ ನಡೆಸಲು ತೀರ್ಮಾನಿಸಿ, ವಿಚಾರಣಾ ಹಾಜರಾತಿ ತಿಳುವಳಿಕೆ ಪತ್ರ ದಿನಾಂಕ:06.04.2018, 05.02.2019, 04.09.2019, 15.10.2019 ಮತ್ತು 06.11.2019ರ ಗಳಂದು ವಿಚಾರಣೆಗೆ ತೆಗೆದುಕೊಂಡು, ವಿಚಾರಣೆ ನಡೆಸಲಾಗಿರುತ್ತದೆ.

ಪ್ರಕರಣದ ವಿಚಾರಣೆಯಲ್ಲಿ 2015-16 ಮತ್ತು 2016-17ನೇ ಸಾಲಿನ ವಿಶೇಷ ತಪಸಣಾ ವರದಿಯಲ್ಲಿ ಉಲ್ಲೇಖದಂತೆ 13 ಮತ್ತು 14ನೇ ಹಣಕಾಸು ಆಯೋಗದ ಅನುದಾನಗಳ ವಿನಿಯೋಗದಲ್ಲಿ ಸಮರ್ಪಕ ದಾಖಲೆಗಳ ನಿರ್ವಹಣೆಯನ್ನು ಮಾಡದಿರುವುದು ಹಾಗೂ ಲೆಕ್ಕ ಪರಿಶೋಧನಾ ತಂಡಕ್ಕೆ ಪರಿಶೀಲನೆಗೆ ಕಡತಗಳನ್ನು ಸಲ್ಲಿಸದೇ ಮತ್ತು ಸರ್ಕಾರಕ್ಕೆ ಖಡ್ಡಾಯವಾಗಿ ಪಾವತಿಸಬೇಕಾದ ತೆರಿಗೆಗಳು ಮತ್ತು ಕರಗಳನ್ನು ಕಟಾಯಿಸಿ ಸರ್ಕಾರದ ಲೆಕ್ಕ ಶೀರ್ಷಿಕೆಗೆ ಪಾವತಿ ಮಾಡದೇ ಇಲ್ಲದಿರುವುದು ವರದಿಯಾಗಿದ್ದು ಹಾಗೂ ಲೆಕ್ಕ ಪರಿಶೋಧನಾ ವರದಿಯಲ್ಲಿ ಆಕ್ಷೇಪಣೆ ವರದಿಯಲ್ಲಿ ರೂ.10,18,139/- ಮತ್ತು ವಸೂಲಾತಿ ಮೊತ್ತ ರೂ.4,26,914/-ಗಳಿಗೆ ಕಾಲಾವಕಾಶ ನೀಡಿದ್ದರೂ, ವಿವರಣೆಯನ್ನು ಅಡಾಕ್ ಸಮಿತಿಗೆ ಸಲ್ಲಿಸದಿಲ್ಲದಿರುವುದರಿಂದ ಆ ಅವಧಿಯಲ್ಲಿ ಕಾರ್ಯನಿರ್ವಹಿಸಿದ ಪ್ರಭಾರ ಪಂಚಾಯತಿ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಸೈಯದ್ ಸಮಿ ಉಲ್ಲಾ ಮತ್ತು ಅಂದಿನ ಅಧ್ಯಕ್ಷರಾದ ಶ್ರೀಮತಿ ಗೌರಮ್ಮ ಇವರು ಹೊಣೆಗಾರರಾಗಿರುತ್ತಾರೆ.

ಆದುದರಿಂದ ಶ್ರೀಮತಿ ಗೌರಮ್ಮ, ಅಂದಿನ ಅಧ್ಯಕ್ಷರು, ಹಿರೇಹಳ್ಳಿ ಗ್ರಾಮ ಪಂಚಾಯತಿ, ಚಳ್ಳಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ ಇವರ ಕರ್ತವ್ಯ ನಿರ್ವಹಣೆ ಹಾಗೂ ದುರ್ನಡತೆ ಮತ್ತು ಅನುದಾನ ದುರ್ಬಳಕೆಯ ಅವ್ಯವಹಾರ ನಡೆದಿರುವುದು ಸಾಬೀತಾಗಿರುವುದರಿಂದ ಇವರನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮದ 1993ರ ಪ್ರಕರಣ 43(ಎ) ರಡಿ ಸದಸ್ಯತ್ವ ಸ್ಥಾನದಿಂದ ತೆಗೆದು ಹಾಕಲು ಸರ್ಕಾರವು ನಿರ್ಣಯಿಸಿದೆ.

ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 1353 ಗ್ರಾಪಂಅ 2017 ಬೆಂಗಳೂರು, ದಿನಾಂಕ: 05-02-2020**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2015-16 ಮತ್ತು 2016-17ನೇ ಸಾಲಿನ ವಿಶೇಷ ತಪಸಣಾ ವರದಿಯಲ್ಲಿ ಉಲ್ಲೇಖವದಂತೆ 13 ಮತ್ತು 14ನೇ ಹಣಕಾಸು ಆಯೋಗದ ಅನುದಾನಗಳ ವಿನಿಯೋಗದಲ್ಲಿ ಸಮರ್ಪಕ ದಾಖಲೆಗಳ ನಿರ್ವಹಣೆಯನ್ನು ಮಾಡದಿರುವುದು ಹಾಗೂ ಲೆಕ್ಕ ಪರಿಶೋಧನಾ ತಂಡಕ್ಕೆ ಪರಿಶೀಲನೆಗೆ ಕಡತಗಳನ್ನು ಸಲ್ಲಿಸದೇ ಮತ್ತು ಸರ್ಕಾರಕ್ಕೆ ಕಡ್ಡಾಯವಾಗಿ ಪಾವತಿಸಬೇಕಾದ ತೆರಿಗೆಗಳು ಮತ್ತು ಕರಗಳನ್ನು ಕಟಾಯಿಸಿ ಸರ್ಕಾರದ ಲೆಕ್ಕ ಶೀರ್ಷಿಕೆಗೆ ಪಾವತಿ ಮಾಡದೇ ಇಲ್ಲದಿರುವುದು ವರದಿಯಾಗಿದ್ದು ಹಾಗೂ ಲೆಕ್ಕ ಪರಿಶೋಧನಾ ವರದಿಯಲ್ಲಿ ಆಕ್ಷೇಪಣೆ ವರದಿಯಲ್ಲಿ ರೂ.10,18,139/- ಮತ್ತು ವಸೂಲಾತಿ ಮೊತ್ತ ರೂ.4,26,914/-ಗಳಿಗೆ ಕಾಲಾವಕಾಶ ನೀಡಿದ್ದರೂ, ವಿವರಣೆಯನ್ನು ಅಡಾಕ್ ಸಮಿತಿಗೆ ಸಲ್ಲಿಸಿಲ್ಲದಿರುವುದರಿಂದ ಪಂಚಾಯತಿ ಅಭಿವೃದ್ಧಿ ಅಧಿಕಾರಿಯಾದ ಶ್ರೀ ಸೈಯದ್ ಸಮಿ ಉಲ್ಲಾ ಇವರ ವಿರುದ್ಧ ಇಲಾಖಾ ವಿಚಾರಣೆಯನ್ನು ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯಿತಿರವರ ಹಂತದಲ್ಲಿ ನಡೆಯುತ್ತಿರುತ್ತದೆ. ಆದರೆ ಅಂದಿನ ಅಧ್ಯಕ್ಷರ ಕರ್ತವ್ಯ ನಿರ್ವಹಣೆ ಹಾಗೂ ದುರ್ನಡತೆ ಮತ್ತು ಅಭಿವೃದ್ಧಿ ಕಾರ್ಯಕ್ರಮ/ಯೋಜನೆಗಳ ಅನುದಾನ ದುರ್ಬಳಕೆಯ ಅವ್ಯವಹಾರ ನಡೆದಿರುವುದು ಸಾಬೀತಾಗಿರುವುದರಿಂದ ಶ್ರೀಮತಿ ಗೌರಮ್ಮ, ಅಂದಿನ ಅಧ್ಯಕ್ಷರು, ಹಿರೇಹಳ್ಳಿ ಗ್ರಾಮ ಪಂಚಾಯತಿ, ಚಳ್ಳಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ ಇವರನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮದ 1993ರ ಪ್ರಕರಣ 43(ಎ)ರನ್ವಯ ಹಿರೇಹಳ್ಳಿ ಗ್ರಾಮ ಪಂಚಾಯತಿಯ ಸದಸ್ಯತ್ವ ಸ್ಥಾನದಿಂದ ತಕ್ಷಣ ಜಾರಿಗೆ ಬರುವಂತೆ ತೆಗೆದು ಹಾಕಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

B. Naveenkumar 10/02/2020.
(ನವೀನ್ ಕುಮಾರ್. ಬಿ)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,(ಗ್ರಾ.ಪಂ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

**ಇವರಿಗೆ**

1) ಜಿಲ್ಲಾಧಿಕಾರಿ, ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ.
2) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ ಚಿತ್ರದುರ್ಗ ಜಿಲ್ಲೆ.
3) ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ಚಳ್ಳಕೆರೆ, ಚಿತ್ರದುರ್ಗ ಜಿಲ್ಲೆ.
4) ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಹಿರೇಹಳ್ಳಿ ಗ್ರಾಮ ಪಂಚಾಯತಿ, ಚಳ್ಳಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ.
5) ಶ್ರೀಮತಿ ಗೌರಮ್ಮ, ಅಂದಿನ ಅಧ್ಯಕ್ಷರು, ಹಿರೇಹಳ್ಳಿ ಗ್ರಾಮ ಪಂಚಾಯತಿ, ಚಳ್ಳಕೆರೆ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ **(ಇವರಿಗೆ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ಚಳ್ಳಕೆರೆ, ಚಿತ್ರದುರ್ಗ ಜಿಲ್ಲೆ ಇವರ ಮುಖಾಂತರ)**
6) ಗಣಕ ಕೋಶ.
7) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.

**ಪ್ರತಿಯನ್ನು ಮಾಹಿತಿಗಾಗಿ:**

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪಂಚಾಯತ್ ರಾಜ್), ರವರ ಆಪ್ತ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.